ಶ್ರೀ ಅಜೀಜ್ ಸೇತ್ (ಸಾರಿಗೆ ಸಚಿವರು):

ಅ) ಇಲ್ಲ

ಆ) ಬಸ್ ನಿಲ್ದಾಣ ನಿರ್ಮಿಸುವ ವಿಷಯ ಸರ್ಕಾರದ ಮುಂದೆ ಇರುವುದಿಲ್ಲ.

ನೆಲಮಂಗಲ ಕ್ಷೇತ್ರದಲ್ಲಿ ಕಪ್ಪು ಹಲಗೆ ಯೋಜನೆಯ ಬಗ್ಗೆ

(715) - ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ನೆಲಮಂಗಲ ಮತ ಕ್ಷೇತ್ರದಲ್ಲಿ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಮಂಜೂರಾದ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು? (ಗ್ರಾಮವಾರುಗಳ ಮಾಹಿತಿ ನೀಡುವುದು)?

2) ಆ ಯೋಜನೆಯಡಿಯಲ್ಲಿ ಕಟ್ಟಿರುವ ಶಾಲಾ ಕೊಠಡಿಗಳು ಕಳಪೆ ಸಾಮಗ್ರಿಗಳಿಂದ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ?

3) ಹಾಗಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು)

1) ನೆಲಮಂಗಲ ಮತ ಕ್ಷೇತ್ರವನ್ನು ಹಾಲಿ ಜಾರಿಯಲ್ಲಿರುವ ಕಪ್ಪು ಹಲಗೆ ಕಾರ್ಯಕ್ರಮದ ಮೊದಲು ಮೂರು ಹಂತಗಳಲ್ಲಿ ಅಳವಡಿಸಿರುವುದಿಲ್ಲ. ಆದರೆ ಈ ಕಾರ್ಯಕ್ರಮದ 4ನೇ ಹಂತದ ಯೋಜನೆಯಲ್ಲಿ ಈ ತಾಲ್ಲೂಕನ್ನು ಅಳವಡಿಸಿ ಕೇಂದ್ರ ಸರ್ಕಾರದ ಅನುಮತಿಗಾಗಿ ಕಳಿಸಲಾಗಿದೆ. ಅವರಿಂದ ಉತ್ತರಕ್ಕಾಗಿ ಕಾಯಲಾಗುತ್ತಿದೆ.

2) ಉದ್ಭವಿಸುವುದಿಲ್ಲ

3) ಉದ್ಭವಿಸುವುದಿಲ್ಲ.

ಮಾಸ್ಟರ್ ಪಾಸ್ ಸೌಲಭ್ಯವನ್ನು ದ್ವಿಚಕ್ರ ವಾಹನಗಳಿಗೂ ವಿಸ್ತರುಸುವ ಬಗ್ಗೆ

(313) - ಶ್ರೀ ಗುರುಪಾದಪ್ಪ ನಾಗಮಾರ ಪಲ್ಲಿ (ಔರಾದ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಪಾಸಣೆಯ ಸಮಯದಲ್ಲಿ ವಾಹನಗಳ ವಿವಿಧ ಬಗೆಯ ದಾಖಲೆ ಪ್ರತಿಗಳನ್ನು ಹಾಜರುಪಡಿಸುವುದನ್ನು ತಪ್ಪಿಸಲು ಎಲ್ಲಾ ವಿವರಗಳನ್ನು ಒಳಗೊಂಡ ಮಾಸ್ಟರ್ ಪಾಸ್ ಸೌಲಭ್ಯಗಳನ್ನು ಜಾರಿಗೆ ತರಲು ಸರ್ಕಾರ ನಿರ್ಧರಿಸಿರುವುದು ನಿಜವಲ್ಲವೆ?

ಆ) ಹಾಗಿದ್ದಲ್ಲಿ ಎಂದಿನಿಂದ ಈ ಸೌಲಭ್ಯವನ್ನು ಜಾರಿಗೆ ತರಲಾಗುವುದು.

ಇ) ಈ ಮಾಸ್ಟರ್ ಪಾಸ್ ಸೌಲಭ್ಯವನ್ನು ದ್ವಿಚಕ್ರ ವಾಹನಗಳಿಗೂ ವಿಸ್ತರಿಸಲಾಗುವುದೆ?

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಅಜೀಜ್ ಸೇತ್ (ಸಾರಿಗೆ ಸಚಿವರು):

ಅ) ಹೌದು

ಆ) ದಿನಾಂಕ 10-3-1990 ರಿಂದಲೇ ಜಾರಿಯಲ್ಲಿದೆ.

ಇ) ಈ ಸೌಲಭ್ಯವನ್ನು ದ್ವಿಚಕ್ರದ ವಾಹನಗಳಿಗೂ ಜಾರಿಗೊಳಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.